॥ಜೈ ಶ್ರೀ ಗುರುದೇವ್॥

# ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ

Sri Adichunchanagiri First Grade College * Channarayapatna Est.1979

## (Circular) ಸೂಚನೆ:

ದಿನಾಂಕ 11–10–2023 ರಂದು **ರಾಜ್ಯಶಾಸ್ತ್ರ** ವಿಭಾಗದ ವತಿಯಿಂದ **ಜಾಗೃತಿ ಅರಿವು ಸಪ್ತಾಹ-2023 "ಭ್ರಷ್ಟಾಚಾರ ನಿರ್ಮೂಲನೆ ಅಭಿಯಾನ"** ಕಾರ್ಯಕ್ರಮವನ್ನು ಕುವೆಂಪು ವೇದಿಕೆಯಲ್ಲಿ ಆಯೋಜಿಸಲಾಗಿದೆ. ಆದ್ದರಿಂದ ಎಲ್ಲಾ ವಿಭಾಗದ ವಿಧ್ಯಾರ್ಥಿಗಳು ಕಡ್ಡಾಯವಾಗಿ ಭಾಗವಹಿಸಲು ಸೂಚಿಸಲಾಗಿದೆ.

ವಂದನೆಗಳೊಂದಿಗೆ.

ಪ್ರಾಚಾರ್ಯರ ಸಹಿ

ಪ್ರಾಂಶುಪಾಲರು
ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು
ಚನ್ನರಾಯಪಟ್ಟಣ.

ವಿಭಾಗದ ಮುಖ್ಯಸ್ಥರ ಸಹಿ

HOD Department of
Political Science
S.A.F.G. College,
Channarayapatna

Praveenkumar

II Jai Sri Gurudev II

# Sri Adichunchanagiri First Grade College

Channarayapatna - 573116

Sri Adichunchanagiri First Grade College Channarayapatna Est.1979

## PROGRAMME CHART

### DEPARTMENT OF POLITICAL SCIENCE & ELC

**Date: 11-10-2023**

Proramme Name: **Vigilance Awareness Week -2023**

| SL. NO. | EVENT |
|---|---|
| 1. | **Welcome speech** : **Dr NAGARAJA N T**<br>HOD & Asst. Professor<br>Department of Political Science<br>SAFGC, C R Patna |
| 2. | **President** : **Dr M K Manjunatha**<br>Principal<br>SAC College, C R Patna |
| 3. | **Pledge Teaching** : **Mr. Siddaraju.**<br>Asst. Professor,<br>Department of Political Science<br>SAFGC, C R Patna |

||JAI SRI GURUDEV||

# SRI ADICHUNCHANAGIRI FIRST GRADE COLLEGE

**CHANNARAYAPATNA-573 116**

Sri Adichunchanagiri First Grade College Channarayapatna Est.1979

**Date: 11-10-2023**

## Awareness of Vigilance Awareness Week -2023

**A Brief Report:**

On 11-10-2023, Awareness of Vigilance Awareness Week 2023 Oct 30-Nov-5 was organized by the Department of Political Science in the Assembly on Wednesday. In the program, Dr. Nagaraja N.T., Assistant Professor, Department of Political Science, taught the introduction of Anti-crime to the students and faculty. Mr. Siddaraju, Assistant Professor, Department of Political Science, preached a pledge to eliminate corruption to all and all the members follow Mr. Siddaraju.







Principal
Sri Adichunchanagiri First Grade College
Channarayapatna

Sri Adichunchanagiri First Grade College
Channarayapatna
Est.1979

Date: 11-10-2023, Awareness of Vigilance Awareness Week -2023

















Principal
Sri Adichunchanagiri First Grade College
Channarayapatna

# ಭ್ರಷ್ಟಾಚಾರ ನಿರ್ಮೂಲನೆ ಜಾಗೃತಿ



ಚನ್ನರಾಯಪಟ್ಟಣ: ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಏರ್ಪಡಿಸಿದ್ದ ಭ್ರಷ್ಟಾಚಾರ ನಿರ್ಮೂಲನೆ ಜಾಗೃತಿ ಅಭಿಯಾನವನ್ನು ಆಯೋಜಿಸಲಾಗಿತ್ತು.

ಕಾಲೇಜಿನ ರಾಜ್ಯಶಾಸ್ತ್ರ ವಿಭಾಗ ಕಾಲೇಜು ಆವರಣದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ವಿಭಾಗದ ಮುಖ್ಯಸ್ಥ ಎನ್.ಟಿ. ನಾಗರಾಜು ಮಾತನಾಡಿದರು. ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಪ್ರಾಂಶುಪಾಲ ಎಂ.ಕೆ. ಮಂಜುನಾಥ್, ಸಹಾಯಕ ಪ್ರಾಧ್ಯಾಪಕರಾದ ಎಚ್.ಜೆ. ಅರ್ಪಿತಾ, ಬಿ.ಎನ್. ಚಂದ್ರಶೇಖರ್, ಎಂ. ನಿರುಪಮಾ, ಪ್ರವೀಣ್ ಕುಮಾರ್, ಎ.ಎನ್. ಶ್ರೀಧರ್, ನಿಂಗರಾಜು ಇದ್ದರು.

SS Adichunchanagiri First Grade College Channarayapatna Est.1979

Sri Adichunchanagiri First Grade College
Channarayapatna
Est. 1979

ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಇಲಾಖೆ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು-560001.

ಸಂಖ್ಯೆ: ಕಾಶಿಇ/ಶೈವಿ/102/ಜಾಅಸ/2023-24

ದಿನಾಂಕ: 27.09.2023

## ಸುತ್ತೋಲೆ

ವಿಷಯ: 'ಜಾಗೃತಿ ಅರಿವು ಸಪ್ತಾಹ - 2023' (Vigilance Awareness Week-2023) ನ್ನು ಆಚರಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂ:ಸಿಆಸುಇ/175/ಸೇಲೋಇಯು/2023 ಬೆಂಗಳೂರು ದಿನಾಂಕ:16.08.2023.
2. ಕೇಂದ್ರ ವಿಚಕ್ಷಣಾ ಆಯೋಗ, ನವದೆಹಲಿ ಇವರ ದಿನಾಂಕ:02.08.2023ರ ಸುತ್ತೋಲೆ ಸಂಖ್ಯೆ:023/ವಿಜಿಎಲ್/ 035/556448.

* * * * * *

Anunsir / Nettiramoam

ಭ್ರಷ್ಟಾಚಾರ ವಿರುದ್ಧ ಜಾಗೃತಿ ಮೂಡಿಸಲು 'ಜಾಗೃತಿ ಅರಿವು ಸಪ್ತಾಹ' ವನ್ನು ಆಚರಿಸುವ ಪೂರ್ವಭಾವಿಯಾಗಿ ದಿನಾಂಕ:16.08.2023 ರಿಂದ 15.11.2023 ರವರೆಗೆ ವಿವಿಧ ಆಂತರಿಕ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭ್ರಷ್ಟಾಚಾರ ವಿರುದ್ಧ ಜಾಗೃತಿ ಮೂಡಿಸುವ ಅಭಿಯಾನವನ್ನು ಕೈಗೊಂಡಿದ್ದು, ಅದನ್ನು ಕಾರ್ಯರೂಪಕ್ಕೆ ತರುವಂತೆ ಕೇಂದ್ರ ವಿಚಕ್ಷಣಾ ಆಯೋಗವು ಎಲ್ಲಾ ರಾಜ್ಯಗಳಿಗೆ ದಿನಾಂಕ:02.08.2023ರ ಸುತ್ತೋಲೆಯಲ್ಲಿ ಸೂಚಿಸಿದೆ (ಪ್ರತಿ ಲಗತ್ತಿಸಿದೆ)

ಅದರಂತೆ, ಉಲ್ಲೇಖಿತ ಸರ್ಕಾರದ ಸುತ್ತೋಲೆ ಪ್ರತಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿ, ರವಾನಿಸುತ್ತಾ, ಸದರಿ ಸುತ್ತೋಲೆಯಲ್ಲಿ ತಿಳಿಸಿರುವಂತೆ ತಮ್ಮ ಕಛೇರಿಯ ವ್ಯಾಪ್ತಿಯ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳಲ್ಲಿ 'ಜಾಗೃತಿ ಅರಿವು ಸಪ್ತಾಹ-2023" (Vigilance Awareness Week-2023) ಆಚರಿಸಲು ಅವಶ್ಯ ಕ್ರಮ ಕೈಗೊಳ್ಳುವಂತೆ ಪ್ರಾಂಶುಪಾಲರುಗಳಿಗೆ ಸೂಚಿಸಲು ತಿಳಿಸಿದೆ.

"ಜಾಗೃತಿ ಅರಿವು ಸಪ್ತಾಹ-2023" ವನ್ನು ಆಚರಿಸಿದ ಬಗ್ಗೆ ತಮ್ಮ ಕಛೇರಿ ವ್ಯಾಪ್ತಿಯ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳಿಂದ ಕ್ರೋಢೀಕೃತ ಅನುಪಾಲನಾ ವರದಿಯನ್ನು ಸಪ್ತಾಹ ಮುಗಿದ ಒಂದು ವಾರದೊಳಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಜಾಗೃತ ವಿಭಾಗ), ಕೊಠಡಿ ಸಂಖ್ಯೆ:114, ಮೊದಲನೇ ಮಹಡಿ, ವಿಕಾಸಸೌಧ, ಬೆಂಗಳೂರು-01 ಇಲ್ಲಿಗೆ ಕಡ್ಡಾಯವಾಗಿ ಸಲ್ಲಿಸುವಂತೆಯೂ ಸಹ ಸೂಚಿಸಲಾಗಿದೆ.

05/10/23

ಅಡಕ: ಉಲ್ಲೇಖಿತ ಪತ್ರದ ಪ್ರತಿ

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ

ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ
ಕಾಲೇಜು ಶಿಕ್ಷಣ ಇಲಾಖೆ, ಮೈಸೂರು-05
ಸ್ವೀಕೃತಿ
ಸಂಖ್ಯೆ 709
ದಿನಾಂಕ 05·10·23

Sri Adichunchanagiri First Grade College
Channarayapatna
Est.1979

# ಪ್ರತಿಜ್ಞೆ

ನಮ್ಮ ದೇಶದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಅಭಿವೃದ್ಧಿಗೆ ಭ್ರಷ್ಟಾಚಾರವು ಒಂದು ಪ್ರಮುಖ ಅಡಚಣೆಯಾಗಿದೆಯೆಂದು ನಾನು ನಂಬುತ್ತೇನೆ. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಸರ್ಕಾರ, ನಾಗರಿಕರು ಮತ್ತು ಖಾಸಗಿ ವಲಯದ ಎಲ್ಲಾ ಪಾಲುದಾರರು ಒಟ್ಟಾಗಿ ಕೆಲಸ ಮಾಡಬೇಕಾಗುತ್ತದೆಂದು ನಾನು ನಂಬುತ್ತೇನೆ.

ಪ್ರತಿ ನಾಗರಿಕನು ಜಾಗರೂಕನಾಗಿದ್ದು, ಎಲ್ಲಾ ಸಮಯದಲ್ಲೂ ಉನ್ನತ ಗುಣಮಟ್ಟದ ಪ್ರಾಮಾಣಿಕತೆ ಮತ್ತು ನಿಷ್ಠೆಗೆ ಬದ್ಧನಾಗಿರಬೇಕೆಂದು ಹಾಗೂ ಭ್ರಷ್ಟಾಚಾರದ ವಿರುದ್ಧ ಹೋರಾಟವನ್ನು ಬೆಂಬಲಿಸಬೇಕೆಂದು ನಾನು ಅರಿತಿದ್ದೇನೆ.

ಆದ್ದರಿಂದ, ನಾನು ಈ ರೀತಿ ಪ್ರತಿಜ್ಞೆ ಮಾಡುತ್ತೇನೆ :-

- ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಪ್ರಾಮಾಣಿಕತೆ ಮತ್ತು ಕಾನೂನಿನ ನಿಯಮಗಳನ್ನು ಅನುಸರಿಸುತ್ತೇನೆ;
- ಲಂಚವನ್ನು ಪಡೆಯುವುದಿಲ್ಲ ಹಾಗೂ ನೀಡುವುದೂ ಇಲ್ಲ;
- ಎಲ್ಲಾ ಕಾರ್ಯಗಳನ್ನು ಪ್ರಾಮಾಣಿಕ ಮತ್ತು ಪಾರದರ್ಶಕ ರೀತಿಯಲ್ಲಿ ನಿರ್ವಹಿಸುತ್ತೇನೆ;
- ಸಾರ್ವಜನಿಕ ಹಿತಾಸಕ್ತಿಯಲ್ಲಿ ಕಾರ್ಯನಿರ್ವಹಿಸುತ್ತೇನೆ;
- ವೈಯಕ್ತಿಕ ನಡವಳಿಕೆಯಲ್ಲಿ ನಿಷ್ಠೆ ಪ್ರದರ್ಶಿಸುವ ಮೂಲಕ ಮಾದರಿಯಾಗಿರುತ್ತೇನೆ;
- ಯಾವುದೇ ಭ್ರಷ್ಟಾಚಾರದ ಘಟನೆಯನ್ನು ಸೂಕ್ತ ಸಂಸ್ಥೆಗೆ ವರದಿ ಮಾಡುತ್ತೇನೆ.

*****